

# ಸರ್ಪ ಚುಂಬನ

★ ಪ.ರಾಮಕೃಷ್ಣ ಶಾಸ್ತ್ರಿ

ಈತ ಮುತ್ತಿಡುತ್ತಿರುವುದು ಚೆಂದುಟಿಯ ಸುಂದರಿಗಲ್ಲ, ತೀಕ್ಷ್ಣವಾದ ವಿಷವುಳ್ಳ ಒಂದು ಜೀವಂತ ಕಾಳಿಂಗ ಸರ್ಪದ ತುಟಿಗಳಿಗೆ! ಮೈ ಜುಂ ಎನಿಸುತ್ತದೆ ಕಂಡವರಿಗೆ. ಆದರೆ ಇವನಿಗದು ಆಟ. ಒಲ್ಲೆನೆಂದು ದೂರ ಸರಿಯುವ, ಹೆಡೆಯೆತ್ತಿ ಬಾಯ್ತೆರೆದು ಕಚ್ಚುತ್ತೇನೆಂದು ಫೂತ್ಕರಿಸುವ ಕಾಳಿಂಗವನ್ನು ಲಲ್ಲೆಗರೆದು ಒಂದಿನಿತೂ ಭಯವಿಲ್ಲದೆ ಬಳಿಗೆ ಹೋಗುತ್ತಾನೆ. ಅವನ ನಿರ್ಭೀತಿ ಕಂಡು ವಿಸ್ಮಯಪಡುವ ಕೋಪಿಷ್ಟ ಕಾಳಿಂಗ ಮಂತ್ರಮುಗ್ಧವಾಗಿ ನಿಂತಿರುವಾಗ ಅದರ ತುಟಿಗಳಿಗೆ ಗಾಢವಾದ ಚುಂಬನ ನೀಡಿ ಕೆಲವು ಸೆಕೆಂಡುಗಳ ಕಾಲ ತುಟಿಯನ್ನು ಅಲ್ಲಿಯೇ ಒತ್ತಿ ಹಿಡಿಯುತ್ತಾನೆ.

ಇವನು ಕ್ರಾಬಿ ಎಂಬ ಇಪ್ಪತ್ತೆರಡರ ಯುವಕ, ಥೈಲಂಡ್ ದೇಶದವನು. ಸರ್ಪಚುಂಬನ ಅವನ ಹುಚ್ಚು ಹವ್ಯಾಸ. ಅಲ್ಲಿರುವ ಉರಗೋದ್ಯಾನದ ಒಳಗಿರುವ ಭಯಂಕರ ವಿಷವಿರುವ ಕಾಳಿಂಗನಿಗೆ ಮೊದಲ ಪ್ರಯತ್ನದಲ್ಲಿಯೇ ಅವನು ಇಪ್ಪತ್ತು ಸಲ ದೀರ್ಘ ಚುಂಬನ ನೀಡಿ ನೋಡುತ್ತ ನಿಂತವರ ಎದೆ ಸ್ಥಬ್ಧವಾಗುವಂತೆ ಮಾಡಿಬಿಟ್ಟ. ಆತ ತುಟಿಗಳನ್ನೊತ್ತುವಾಗ ಸರ್ಪ ಯಾಕೆ ಸುಮ್ಮನಿರುತ್ತದೆ ಎಂಬುದು ಉರಗ ತಜ್ಞರಿಗೂ ಸೋಜಿಗವಾದ ವಿಷಯ. ■

